ಅ) ಇಲ್ಲ

ಆ) ನೀಡುತ್ತಿರುವುದಾಗಿ ತಿಳಿಸಿಲ್ಲ

ಇ) ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರಿಗೆ ಗೌರವಧನ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

**ರಾಜ್ಯದಲ್ಲಿ ಕಂಪ್ಯೂಟರ್ ಶಿಕ್ಷಣ**

2210 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಕಂಪ್ಯೂಟರ್ ಶಿಕ್ಷಣಕ್ಕೆ ಶಿಕ್ಷಣ ಮಂಡಳಿಯನ್ನು ರಚಿಸಲು ಸರ್ಕಾರ ಯೋಚಿಸಿದೆಯೇ?*

*ಆ) ಹಾಗಿದ್ದಲ್ಲಿ, ಈ ಮಂಡಳಿಗೆ ಬೇಕಾದ ರೂಪುರೇಷೆಗಳನ್ನು ತಯಾರಿಸಲಾಗಿದೆಯೇ?*

*ಇ) ಹಾಗೂ ಇದಕ್ಕೆ ಸಂಬಂಧಿಸಿದಂತೆ ಸಮಿತಿಯನ್ನೇನಾದರೂ ರಚಿಸಿದೆಯೇ? ಹಾಗಿದ್ದಲ್ಲಿ ಸದರಿ ಸಮಿತಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆಯೇ?*

*ಈ) ಈ ಕಂಪ್ಯೂಟರ್ ಶಿಕ್ಷಣ ಮಂಡಳಿ ಯಾವಾಗಿನಿಂದ ಕಾರ್ಯಾರಂಭ ಮಾಡುವುದು?*

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ದಿನಾಂಕ : 19-3-97, ಸಂ:ಇಡಿ 45 ಯುಆರ್‌ಸಿ 97 ರ ಸರ್ಕಾರಿ ಆದೇಶದಲ್ಲಿ ಖಾಸಗೀ ಕಂಪ್ಯೂಟರ್ ಶಿಕ್ಷಣ ಸಂಸ್ಥೆ ಪ್ರತಿಬಂಧಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ. ಅದರ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

ಈ) ಅನ್ವಯಿಸುವುದಿಲ್ಲ.

**ಶಾಲಾಭಿವೃದ್ಧಿ ಸಮಿತಿಗಳಿಗೆ ಅಧಿಕಾರ**

2211 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸರ್ಕಾರದ ಸುತ್ತೋಲೆಯಂತೆ ಶಾಲಾಭಿವೃದ್ಧಿ ಸಮಿತಿಗಳ ಅಧಿಕಾರ ವ್ಯಾಪ್ತಿಯೇನು?*

ಅ) ಶಾಲಾಭಿವೃದ್ಧಿ ಸಮಿತಿಗಳಲ್ಲಿ ಸಾರ್ವಜನಿಕ ದೇಣಿಗೆ ನೀಡುವ ವ್ಯಕ್ತಿಗಳಿಗೆ ಅವಕಾಶ ಕಲ್ಪಿಸುವ ಇಂದಿನ ಸರಕಾರಕ್ಕಿದೆಯೇ?

ಇ) ಸಾರ್ವಜನಿಕರು ಶಾಲಾಭಿವೃದ್ಧಿಗೆ ದೇಣಿಗೆ ನೀಡಿದ್ದಲ್ಲಿ ಅಭಿವೃದ್ಧಿ ಸಮಿತಿಯವರು ಲೆಕ್ಕಪತ್ರಗಳನ್ನು ಯಾವ ರೀತಿ ನಿರ್ವಹಿಸಬೇಕು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಶಾಲಾಭಿವೃದ್ಧಿ ಸಮಿತಿಗಳು ಹಾಗೂ ಗ್ರಾಮ ಶಿಕ್ಷಣ ಸಮಿತಿಗಳ ಅಧಿಕಾರ ಹಾಗೂ ಕಾರ್ಯವ್ಯಾಪ್ತಿ ಈ ಕೆಳಕಂಡಂತಿದೆ?

1. ಶಾಲೆಗೆ ಅಗತ್ಯವಾಗಿ ಬೇಕಾಗಿರುವ ಶಾಲಾ ಕಟ್ಟಡ ಆಟದ ಮೈದಾನ, ಶಾಲೆಗೆ ರಿಪೇರಿ ಪೀಠೋಪಕರಣ, ಪಾಠೋಪಕರಣಗಳನ್ನು ದಾನಿಗಳ ಮೂಲಕ ಹಾಗೂ ಪೋಷಕರ ಮೂಲಕ ಪಡೆಯುವುದು ಹಾಗೂ ಕಟ್ಟಡ ನಿರ್ಮಿಸುವುದು. ಅಗತ್ಯವಾದ ಸಾಮಗ್ರಿಗಳನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ ಮಂಚಾಯತಿಯಿಂದ ಪಡೆಯುವುದು.

2. ಸಮೀಪದಲ್ಲಿ ಕಾರ್ಖಾನೆಗಳು, ರೋಟರಿಕ್ಲಬ್ ಇತರೆ ಸೇವಾ ಸಂಸ್ಥೆಗಳಿಂದ ಸಹಾಯ ಪಡೆದು ಶಾಲೆಯ ಅಗತ್ಯಗಳನ್ನು ಪೂರೈಸುವುದು.

3. ಶಾಲೆಗಳಿಗೆ ಮಕ್ಕಳನ್ನು ಕಳುಹಿಸದೇ ಇರುವ ಮತ್ತು ಶಾಲೆ ಬಿಡುವ ಮಕ್ಕಳ ಪೋಷಕರನ್ನು ಭೇಟಿ ಮಾಡಿ ಅವರ ಮನವೊಲಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡುವುದು.

4. ಮಕ್ಕಳನ್ನು ಶಾಲೆಗೆ ಬರುವಂತೆ ಪ್ರೇರೇಪಿಸಲು ಮಧ್ಯಾಹ್ನ ಉಪಹಾರ, ಪಠ್ಯಪುಸ್ತಕ, ಸಮವಸ್ತ್ರಗಳನ್ನು ಉಚಿತವಾಗಿ ದಾನಿಗಳಿಂದ ಪಡೆದು ವಿತರಿಸಲು ವ್ಯವಸ್ಥೆ ಮಾಡುವುದು.

5. ಶಾಲೆಯನ್ನು ಆಕರ್ಷಣೆಯಾಗಿ ಮಾಡಲು ಶಾಲೆಯ ಮುಂಭಾಗದಲ್ಲಿ ಬೇಲಿ ಅಥವಾ ಕಾಂಪೌಂಡ್ ನಿರ್ಮಿಸಿ ಸಸಿಗಳನ್ನು ನೆಡುವುದು, ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

6. ಬಡತನದ ಕಾರಣ, ಶಾಲೆ ಬಿಡುವ ಹೆಣ್ಣುಮಕ್ಕಳ ಪೋಷಕರನ್ನು ಭೇಟಿ ಮಾಡಿ, ಅವರಿಗೆ ಆರ್ಥಿಕ ಸಹಾಯವನ್ನು ಮಾಡುವುದು.

7. ಮಕ್ಕಳ ನೈತಿಕ ಮಟ್ಟವನ್ನು ಉತ್ತಮಪಡಿಸುವಲ್ಲಿ ಶಿಕ್ಷಕರಿಗೆ ಪ್ರೋತ್ಸಾಹ ನೀಡುವುದು ಹಾಗು ಶಿಕ್ಷಕರುಗಳು ಕ್ರಮಬದ್ಧವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು.

8. ಶಾಲೆಗಳಲ್ಲಿ ನಡೆಸುವ ರಾಷ್ಟ್ರೀಯ ದಿನಾಚರಣೆಗಳ ಸಮಯದಲ್ಲಿ ಸಮಿತಿಯ ಸದಸ್ಯರು ಪೂರ್ಣವಾಗಿ ಭಾಗವಹಿಸಿ ಪ್ರೋತ್ಸಾಹ ನೀಡಿ ಮಕ್ಕಳ ತಂದೆ-ತಾಯಿಗಳು ಶಾಲೆಗೆ ನಿಕಟ ಸಂಬಂಧ ಕಲ್ಪಿಸುವುದು.

9. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಎಲ್ಲಾ ರೀತಿಯಿಂದಲೂ ಹೆಚ್ಚಿನ ಆದ್ಯತೆ ನೀಡಿ, ಶಾಲೆ ಬಿಟ್ಟ ಮಕ್ಕಳನ್ನು ಅನೌಪಚಾರಿಕ ಕೇಂದ್ರದಲ್ಲಿ 6 ವರ್ಷದಿಂದ 14 ವರ್ಷದ ಮಕ್ಕಳನ್ನು ಅನೌಪಚಾರಿಕ ಶಿಕ್ಷಣ ಕೇಂದ್ರಕ್ಕೆ ಕಡ್ಡಾಯವಾಗಿ ಕಳುಹಿಸಲು ಪ್ರೋತ್ಸಾಹಿಸುವುದು. 15 ರಿಂದ 35 ವರ್ಷ ವಯೋಮಿತಿಯಲ್ಲಿರುವ ಅನಕ್ಷರಸ್ಥರಾಗಿರುವವರನ್ನು ವಯಸ್ಕರ ಶಿಕ್ಷಣದಡಿಯಲ್ಲಿ ಕಡ್ಡಾಯವಾಗಿ ಕಲಿಯಲು ಪ್ರೋತ್ಸಾಹಿಸುವುದು.

10. ಶಾಲಾ-ಸಂಕೀರಣದಲ್ಲಿ ಶಾಲಾ ಉಪಾಧ್ಯಾಯರುಗಳು ತಪ್ಪದೇ ಭಾಗವಹಿಸುವಂತೆ ಮಾಡಿ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನ ಪಡೆಯುವಂತೆ ವ್ಯವಸ್ಥೆ ಮಾಡುವುದು.

11. ಶೈಕ್ಷಣಿಕ ಸಮಿತಿಯ ನಿಧಿಯನ್ನು ಮುಖ್ಯ ಶಿಕ್ಷಕರು ಹಾಗೂ ಅಧ್ಯಾಪಕರ ಜಂಟಿ ಖಾತೆಯಲ್ಲಿ ಇಡತಕ್ಕದ್ದು. ಒಂದು ಸಾವಿರ ರೂ. ಒಳಗೆ ಶೈಕ್ಷಣಿಕ ಸಮಿತಿ ತೀರ್ಮಾನಿಸಿ ಖರ್ಚು ಮಾಡುವುದು.

ಆ) ಹೌದು.

ಇ) ಶಾಲಾಭಿವೃದ್ಧಿ ಸಮಿತಿಯಲ್ಲಿ ಶಾಲಾ ಮುಖ್ಯೋಪಾಧ್ಯಾಯರು, ಕಾರ್ಯದರ್ಶಿ ಆಗಿರುತ್ತಾರೆ. ಶಾಲಾಭಿವೃದ್ಧಿ ಸಮಿತಿಗೆ ನೀಡುವ ದೇಣಿಗೆ ಹಾಗೂ ಖರ್ಚು ಲೆಕ್ಕವನ್ನು ಪ್ರತ್ಯೇಕವಾಗಿ ಮುಖ್ಯೋಪಾಧ್ಯಾಯರು, ಕಾರ್ಯದರ್ಶಿಯವರೇ ನಿರ್ವಹಿಸುತ್ತಾರೆ ಹಾಗೂ ಶಾಲಾಭಿವೃದ್ಧಿ ಸಮಿತಿಯ ನಿಧಿಯನ್ನು ಶಾಲಾ ಮುಖ್ಯ ಶಿಕ್ಷಕರು ಮತ್ತು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಜಂಟಿ ಖಾತೆಯಲ್ಲಿ ಬ್ಯಾಂಕ್‌ನಲ್ಲಿ ಇಡಬೇಕು. ಒಂದು ಸಾವಿರ ರೂ. ಒಳಗೆ ಶೈಕ್ಷಣಿಕ ಸಮಿತಿ ತೀರ್ಮಾನಿಸಿ ಖರ್ಚು ಮಾಡಬಹುದಾಗಿದೆ. ಈ ಹಣಕ್ಕೆ ಹೆಚ್ಚು ಮೇಲ್ಪಟ್ಟು ಖರ್ಚು ಮಾಡಬೇಕಾಗಿದ್ದಲ್ಲಿ ಉಪನಿರ್ದೇಶಕರ ಮೂಲಕ ಜಿಲ್ಲಾ ಪಂಚಾಯತ್ ಅನುಮೋದನೆ ಪಡೆಯಬೇಕಾಗಿದೆ. ಈ ನಿಧಿಯಿಂದ ಖರ್ಚು - ವೆಚ್ಚಗಳ ಎಲ್ಲಾ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ಮುಖ್ಯೋಪಾಧ್ಯಾಯರು ಕಾರ್ಯದರ್ಶಿಯವರು ನಿರ್ವಹಿಸುತ್ತಾರೆ.

## ಅನುದಾನಿತ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳ ತೆರೆವಾದ ಶಿಕ್ಷಕರ ಹುದ್ದೆ

2212 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದ ಅನುದಾನಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ತೆರವಾದ ಶಿಕ್ಷಕೇತರ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?*

*ಆ) ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇದೆ? (ವಿವರ ನೀಡುವುದು)*

*ಇ) ಖಾಲಿಯಾದ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರವು ಯಾವಾಗ ಆದೇಶ ಹೊರಡಿಸುವುದು?*